**ದಿನಾಂಕಃ 17/01/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಸಿ.ಕೆ.ಎಂ ವಕೀಲರಿಂದಃ**

1. ನನ್ನ ತಾತನ ಹೆಸರು ಕರಿಯಯ್ಯ. ನನ್ನ ತಂದೆಯ ಹೆಸರು ಸಣ್ಣಯ್ಯ ಅಲಿಯಾಸ್ ಸಣ್ಣಹೈದ. ನನ್ನ ತಂದೆಯನ್ನು ಸಣ್ಣಹೈದ ಎಂದು ಕರೆಯುವ ದಾಖಲಾತಿ ಎಂದರೆ ಅಸ್ಸೆಸ್ಮೆಂಟ್ ಮತ್ತು ಡಿಮಾಂಡ್ ಇದೆ. ಸರ್ವೆ ನಂ.174 ರ ಆರ್.ಟಿ.ಸಿ.ಯಲ್ಲಿ ಚಂದ್ರಶೇಖರ್ ಬಿನ್ ಕರಿಯಯ್ಯನ ಸಣ್ಣಯ್ಯ ಎಂದು ನಮೂದಿದೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಅದು ಹುಳುವಾಡಿಕೆ ಜಮೀನು ಅದರಲ್ಲಿ ಎಲ್ಲರಿಗೂ ಭಾಗ ಹೋಗಿದೆ ಎಂದು ನುಡಿಯುತ್ತಾರೆ. ಬೇರೆ ಸರ್ವೆ ನಂಬರ್ ಜಮೀನುಗಳ ದಾಖಲಾತಿಗಳಲ್ಲಿ ನನ್ನ ತಂದೆಯ ಹೆಸರು ಸಣ್ಣಯ್ಯ ಅಲಿಯಾಸ್ ಸಣ್ಣಹೈದ ಎಂದು ನಮೂದು ಇಲ್ಲ.

2. 2 ನೇ ಪ್ರತಿವಾದಿಯ ದೊಡ್ಡಪ್ಪನ ಹೆಸರು ಚಂದ್ರಶೇಖರಯ್ಯ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. ನಾನು ನನ್ನ ವಕೀಲರಿಗೆ 2 ನೇ ಪ್ರತಿವಾದಿಯ ತಂದೆಯ ಹೆಸರಿನ ಬಗ್ಗೆ ಮಾಹಿತಿ ನೀಡಿಲ್ಲ. ನಾನು ಕೇಶವಮೂರ್ತಿ ಎಂಬುವವರ ವಿರುದ್ಧ ಈ ದಾವೆಯನ್ನು ಹೂಡಿದ್ದೇನೆ. 4 ನೇ ಪ್ರತಿವಾದಿಯ ತಂದೆಯ ಹೆಸರು ಸಣ್ಣಪುಟ್ಟಯ್ಯ. 4 ನೇ ಪ್ರತಿವಾದಿಗೆ 2 ನೇ ಪ್ರತಿವಾದಿ ಸಹೋದರನಾಗಬೇಕು. ಶಂಕರ ಎಂಬುವವರ ವಿರುದ್ಧ ಈ ದಾವೆಯನ್ನು ಹೂಡಿದ್ದೇನೆ, ಅವರ ತಂದೆಯ ಹೆಸರು ಸಣ್ಣಪುಟ್ಟಯ್ಯ. ಸಣ್ಣಪುಟ್ಟಯ್ಯ ಮತ್ತು ಚಂದ್ರಶೇಖರಯ್ಯ ಅಣ್ಣತಮ್ಮಂದಿರು ಎಂದರೆ ಸರಿ.

3. ಸಣ್ಣಪುಟ್ಟಯ್ಯ ಮತ್ತು ಚಂದ್ರಶೇಖರಯ್ಯ ರವರ ತಂದೆಯ ಹೆಸರು ಕುಳ್ಳಯ್ಯ ಎಂದರೆ ಸರಿ. ಚಂದ್ರಶೇಖರಯ್ಯ ರವರಿಗೆ ಸಣ್ಣನಂಜಯ್ಯ ಮತ್ತು ತಮ್ಮಣ್ಣ ಎಂಬ ಇನ್ನು ಇಬ್ಬರು ಸಹೋದರರು ಇದ್ದಾರೆ ಎಂದರೆ ಸರಿ.

4. ಆಸ್ತಿ ಸಂಃ 213 ಚಂದ್ರಶೇಖರಯ್ಯ ಬಿನ್ ಕುಳ್ಳಯ್ಯ ರವರ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಅದು ಯಾರ ಮಾಲೀಕತ್ವ ಮತ್ತು ಸ್ವಾಧೀನದಲ್ಲಿದೆ ಎಂದು ನನಗೆ

ಗೊತ್ತಿಲ್ಲ. ಅದರ ಅಳತೆ ನನಗೆ ಗೊತ್ತಿಲ್ಲ. ಅದು ನಿವೇಶನ. ಸಾಕ್ಷಿ ಮುಂದುವರೆದು ಅದು ನಮ್ಮ ಸ್ವತ್ತು ಎಂದು ನುಡಿಯುತ್ತಾರೆ. ಆಸ್ತಿ ನಂ.213ರ ದಕ್ಷಿಣಕ್ಕೆ ರಸ್ತೆ ಇದೆ, ಉತ್ತರಕ್ಕೆ ಬೋರಯ್ಯ ನವರ ಬ್ಯಾರೇನ್ ಮನೆ ಇದೆ. ಪಶ್ಚಿಮಕ್ಕೆ ಕುಳ್ಳಯ್ಯ ನವರ ಹೆಂಚಿನ ಮನೆ ಇದೆ. ಕುಳ್ಳಯ್ಯ 2ನೇ ಪ್ರತಿವಾದಿ-ಜಯಣ್ಣ ನವರಿಗೆ ತಾತನಾಗಬೇಕು. ಪೂರ್ವಕ್ಕೆ ನಮ್ಮದೇ ಖಾಲಿ ನಿವೇಶನ ಸಂಃ183/213. ಅದು ನನ್ನ ಸ್ವಾಧೀನದಲ್ಲಿದೆ. ಅದನ್ನು ಯಾರೂ ಒತ್ತುವರಿ ಮಾಡಿಲ್ಲ. ಸಾಕ್ಷಿ ಮುಂದುವರೆದು ಒತ್ತುವರಿ ಮಾಡಲು ಬಂದಾಗ ಈ ದಾವೆಯನ್ನು ಹೂಡಿದ್ದೇನೆ ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ಇರುವ ಕುಳ್ಳಯ್ಯ ನವರ ಆಸ್ತಿ ನಂಬರ್ ಗೊತ್ತಿಲ್ಲ. ಕುಳ್ಳಯ್ಯ ನವರ ಆಸ್ತಿಯ ಪೂರ್ವಕ್ಕೆ ಏನಿದೆ ಎಂದು ನನಗೆ ಗೊತ್ತಿಲ್ಲ. ಉತ್ತರಕ್ಕಿರುವ ಬೋರಯ್ಯ ನವರ ಆಸ್ತಿ ಸಂಖ್ಯೆ ಗೊತ್ತಿಲ್ಲ. ಬೋರಯ್ಯ ನವರ ದಕ್ಷಿಣಕ್ಕೆ ಯಾರ ಆಸ್ತಿ ಇದೆ ಎಂದು ಗೊತ್ತಿಲ್ಲ.

5. ದಾವಾಸ್ವತ್ತಿನ ಪೂರ್ವ-ಪಶ್ಚಿಮ 90 ಅಡಿ, ಉತ್ತರ-ದಕ್ಷಿಣ 24 ಅಡಿ ಎಂದು ಬರೆಸಿದ್ದೇನೆ. ಸದರಿ ಅಳತೆ ಬಗ್ಗೆ ದಾಖಲಾತಿಗಳು ಪಂಚಾಯತಿಯಲ್ಲಿವೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಮೂಲತಃ ದಾವಾಸ್ವತ್ತು ನನ್ನ ತಾತನಿಗೆ ಸೇರಿದ್ದು. ದಾವಾಸ್ವತ್ತು ನನ್ನ ತಾತನ ಹೆಸರಿನಲ್ಲಿದ್ದ ದಾಖಲೆಗಳು ಇವೆ. ನನ್ನ ತಾತನಿಂದ ನನ್ನ ತಂದೆಗೆ ವರ್ಗಾವಣೆ ಆದ ದಾಖಲೆಗಳು ಇವೆ. ನನ್ನ ತಂದೆಯ ಹೆಸರಿನಿಂದ ನನ್ನ ಹೆಸರಿಗೆ ವರ್ಗಾವಣೆ ಆಗಿ ಸುಮಾರು 40-50 ವರ್ಷ ಆಗಿರಬಹುದು. 2016-17ಕ್ಕೆ ಸಂಬಂಧಿಸಿದ ದಾವಾಸ್ವತ್ತಿನ ಪಂಚಾಯತಿ ದಾಖಲಾತಿಗಳು ಇವೆ.

6. ಮಾಕೋಡು ಗ್ರಾಮ ಪಂಚಾಯತಿಗೆ ಆರ್.ಹೊಸಹಳ್ಳಿ ಗ್ರಾಮ ಸೇರಿದೆ ಎಂದರೆ ಸರಿ. ಮಾಕೋಡು ಗ್ರಾಮ ಪಂಚಾಯತಿಯಲ್ಲಿ ಆಸ್ತಿ ನಂಬರ್ 213 ಚಂದ್ರಶೇಖರಯ್ಯ ಬಿನ್ ಕುಳ್ಳಯ್ಯ ರವರ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ವತ್ತಿನ ಅಸ್ಸೆಸ್ಮೆಂಟ್, ಡಿಮಾಂಡ್ ರಿಜಿಸ್ಟರ್ ಎಕ್ಸ್ ಟ್ರ್ಯಾಕ್ಟ್ ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಾವಾಸ್ವತ್ತಿನ ಮಾಲೀಕತ್ವ ಮತ್ತು ಸ್ವಾಧೀನಾನುಭವ ನನಗೆ ಇಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತು ನನ್ನ ತಾತ, ನನ್ನ ತಂದೆ ಮತ್ತು ನನ್ನ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ಆಸ್ತಿ

ನಂಃ 213 ನಮ್ಮ ಕುಟುಂಬಕ್ಕೆ ಸಂಬಂಧಪಟ್ಟ ಮತ್ತು ಮಾಲೀಕತ್ವಕ್ಕೆ ಒಳಪಟ್ಟ ಆಸ್ತಿಯಲ್ಲ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ನನ್ನ ಜಾಗವನ್ನು ಒತ್ತುವರಿ ಮಾಡಿಕೊಳ್ಳಲು ಬಂದಾಗ ನಮಗೆ ಜಾಗ ಕೊಡಿಸಿಕೊಡಿ ಎಂದು ದಾವೆ ಹೂಡಿದ್ದೇನೆ. 5-6 ವರ್ಷಗಳ ಹಿಂದೆ ಜಗಳವಾಯಿತು, ಅದರೆ ತಾರೀಖು, ತಿಂಗಳು, ಇಸವಿ ನೆನಪಿಲ್ಲ. ನಾನು ಪೊಲೀಸರಿಗೆ ದೂರು ಕೊಡಲಿಲ್ಲ, ಅದರೆ ನಾನು ಆಸ್ಪತ್ರೆಯಲ್ಲಿ ದಾಖಲಾಗಿದ್ದೆ, ಪೊಲೀಸರು ಬಂದಿದ್ದರು. ಗ್ರಾಮದಲ್ಲಿ ಯಾವುದೇ ಪಂಚಾಯತಿ ನಡೆದಿಲ್ಲ. ಪ್ರತಿವಾದಿಗಳು ಈ ಜಾಗ ನಿಮ್ಮ ಮಾಲೀಕತ್ವದಲ್ಲಿಲ್ಲ ಮತ್ತು ಸ್ವಾಧೀನದಲ್ಲಿಲ್ಲ ಎಂದು ಗಲಾಟೆ ಮಾಡಿದ್ದರು. ದಾವಾಸ್ವತ್ತಿಗೆ ಕೊಟ್ಟಿರುವ ಚಕ್ಕುಬಂದಿಯಲ್ಲಿ ನನಗೆ ಯಾವುದೇ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಆಸ್ತಿ ಸಂಖ್ಯೆ ಕೊಟ್ಟು ಪ್ರತಿವಾದಿಗಳ ದೊಡ್ಡಪ್ಪನ ಆಸ್ತಿಯನ್ನು ಹೊಡೆಯಲು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರನ್ನು ಸಣ್ಣಹೈದ ಅಲಿಯಾಸ್ ಸಣ್ಣಯ್ಯ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**